ಸದನದಲ್ಲಿ ಉತ್ತರಿಸುವ
ಪ್ರಶ್ನೆಗಳ ಪಟ್ಟಿ

ಒಟ್ಟು ಪ್ರಶ್ನೆಗಳು – ೧೫

**ಪಟ್ಟಿ–೧೧**

# ಕರ್ನಾಟಕ ವಿಧಾನ ಪರಿಷತ್ತು

**ನೂರ ಐವತ್ತೈದನೇ ಅಧಿವೇಶನ**

**ಬುಧವಾರ, ದಿನಾಂಕ: ೧೯ನೇ ಮಾರ್ಚ್, ೨೦೨೫**

---

**ಸಮೂಹ – III**

೧. ಸಾರಿಗೆ ಮತ್ತು ಮುಜರಾಯಿ ಸಚಿವರು

೨. ಲೋಕೋಪಯೋಗಿ ಸಚಿವರು

೩. ಕಂದಾಯ ಸಚಿವರು

೪. ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು

೫. ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು

೬. ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು

---

## ಕಾರವಾರ ಜಿಲ್ಲಾ ಸಮುದ್ರ ದಂಡೆಯಗುಂಟಾ ಸಾಗರ ಮಾಲಾ ಯೋಜನೆಯಡಿಯಲ್ಲಿ ನಿರ್ಮಾಣವಾಗಲಿರುವ ಬಂದರುಗಳ ಕುರಿತು

**ಶ್ರೀ ಎಸ್.ವ್ಹಿ. ಸಂಕನೂರ (ಪದವೀಧರರ ಕ್ಷೇತ್ರ) –**

೧೫೧ (೧೩೩೧) ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಾರವಾರ ಜಿಲ್ಲೆಯ ಸಮುದ್ರ ದಂಡೆಯ ವ್ಯಾಪ್ತಿಯಲ್ಲಿ ಎಷ್ಟು ಬಂದರುಗಳು ಕಾರ್ಯನಿರ್ವಹಿಸುತ್ತಿವೆ ; ಮತ್ತು ಅವುಗಳು ಏನು ಸಾಗಾಣಿಕೆ ಮಾಡುತ್ತಿವೆ ; (ಮಾಹಿತಿ ನೀಡುವುದು)

(ಆ) ಸಾಗರಮಾಲಾ ಯೋಜನೆಯಡಿಯಲ್ಲಿ ಕಾರವಾರ ಸಮುದ್ರ ದಂಡೆಯವರೆಗೆ ಎಷ್ಟು ಹೊಸ ಬಂದರುಗಳು ನಿರ್ಮಾಣ ಹಂತದಲ್ಲಿವೆ ; ಯಾವ ಉದ್ದೇಶಕ್ಕಾಗಿ ನಿರ್ಮಾಣಗೊಳ್ಳುತ್ತಿವೆ ; ಮತ್ತು ಅವುಗಳ ನಿರ್ಮಾಣಕ್ಕೆ ನಿಗದಿಯಾಗಿರುವ ವೆಚ್ಚವೆಷ್ಟು ; (ವಿವರ ನೀಡುವುದು)

(ಇ) ಹೊಸ ಬಂದರುಗಳ ನಿರ್ಮಾಣಕ್ಕೆ ಮೀನುಗಾರರು ಹಾಗೂ ಸಾರ್ವಜನಿಕರು ವಿರೋಧ ವ್ಯಕ್ತಪಡಿಸಿರುವುದು ನಿಜವೇ ; ಹಾಗಿದ್ದಲ್ಲಿ, ಸಂಪೂರ್ಣ ಮಾಹಿತಿ ನೀಡುವುದು ?

## ಶಿರಾ ತಾಲ್ಲೂಕಿನಲ್ಲಿ ನಿರ್ಮಾಣವಾಗುತ್ತಿರುವ ವಧಾಗಾರದ ಬಗ್ಗೆ

**ಶ್ರೀ ಚಿದಾನಂದ್ ಎಂ. ಗೌಡ (ಪದವೀಧರರ ಕ್ಷೇತ್ರ) –**

೧೫೨ (೧೩೬೨) ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಅತಿ ಹೆಚ್ಚು ಕುರಿ ಮತ್ತು ಮೇಕೆಗಳನ್ನು ಹೊಂದಿರುವ ತಾಲ್ಲೂಕು ಯಾವುದು ; ಇಲ್ಲಿ ಇರುವ ಕುರಿ ಮತ್ತು ಮೇಕೆಗಳ ಸಂಖ್ಯೆ ಎಷ್ಟು ;

(ಆ) ಪಶುಪಾಲನಾ ಇಲಾಖೆಯಿಂದ ಕುರಿ ಮತ್ತು ಮೇಕೆ ಸಾಕಾಣಿಕೆಗೆ ಪೂರಕ ವಾತಾವರಣ ನಿರ್ಮಾಣಕ್ಕಾಗಿ ಶಿರಾ ತಾಲ್ಲೂಕಿನ ರೈತರಿಗೆ ನೀಡುತ್ತಿರುವ ಸೌಲಭ್ಯಗಳಾವುವು ;

(ಇ) ರಾಜ್ಯ ಕುರಿ ಮತ್ತು ಉಣ್ಣೆ ಅಭಿವೃದ್ಧಿಗೆ ನಿಗಮದ ವತಿಯಿಂದ ಶಿರಾ ತಾಲ್ಲೂಕಿನಲ್ಲಿ ಆಧುನಿಕ ಸಂಸ್ಕರಣಾ ಕೇಂದ್ರವನ್ನು (ವಧಾಗಾರ) ಮಂಜೂರು ಮಾಡಲಾಗಿದೆಯೇ ; ಮಾಡಲಾಗಿದ್ದರೆ, ಯಾವ ವರ್ಷ ಮಂಜೂರು ಮಾಡಲಾಗಿದೆ ಮತ್ತು ಇದರ ಸಾಮರ್ಥ್ಯವೆಷ್ಟು ; ರಾಜ್ಯದ ಇತರ ಯಾವ ಜಿಲ್ಲೆಯಲ್ಲಿ ವಧಾಗಾರಗಳು ನಿರ್ಮಾಣವಾಗಿವೆ ;

(ಈ) ವಧಾಗಾರ ನಿರ್ಮಾಣಕ್ಕಾಗಿ ಎಷ್ಟು ಭೂಮಿಯನ್ನು ಭೂಸ್ವಾಧೀನ ಮಾಡಿಕೊಳ್ಳಲಾಗಿದೆ/ಮಂಜೂರು ಮಾಡಲಾಗಿದೆ ;

(ಉ) ಸದರಿ ವಧಾಗಾರದಿಂದ ಎಷ್ಟು ಜನತೆಗೆ ಉದ್ಯೋಗ ದೊರೆಯಲಿದೆ ಹಾಗೂ ವಾರ್ಷಿಕವಾಗಿ ಎಷ್ಟು ವಹಿವಾಟಿನ ನಿರೀಕ್ಷೆಯಿದೆ ;

(ಊ) ವಧಾಗಾರ ನಿರ್ಮಾಣದ ಅಂದಾಜು ವೆಚ್ಚವೆಷ್ಟು ; ಎಷ್ಟು ಹಣ ಬಿಡುಗಡೆ ಮಾಡಲಾಗಿದೆ ; ಬಾಕಿಯಿರುವ ಹಣವನ್ನು ಬಿಡುಗಡೆ ಮಾಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ; ನಿರ್ಮಾಣ ಪ್ರಸ್ತುತ ಯಾವ ಹಂತದಲ್ಲಿದೆ ; ಕಾಮಗಾರಿಯನ್ನು ಯಾವ ಸಂಸ್ಥೆಗೆ ನೀಡಲಾಗಿದೆ ;

(ಋ) ವಧಾಗಾರ ನಿರ್ಮಾಣದಿಂದ ಸ್ಥಳೀಯ ಕುರಿ, ಮೇಕೆ ಸಾಕಾಣಿಕಾದಾರರಿಗೆ ಆಗುವ ಅನುಕೂಲಗಳೇನು ?

## ಅಕ್ರಮ ಸಾಗುವಳಿ ಜಮೀನು ಸಕ್ರಮಗೊಳಿಸುವ ಕುರಿತು

**ಡಾ: ಯತೀಂದ್ರ ಎಸ್. (ವಿಧಾನಸಭೆಯಿಂದ ಚುನಾಯಿತರಾದವರು) –**

೧೫೩ (೧೨೫೫) ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಈವರೆಗೆ ಅಕ್ರಮ ಸಾಗುವಳಿ ಸಕ್ರಮ ಕೋರಿ ಸಲ್ಲಿಸಿರುವ ಅರ್ಜಿಗಳ ಸಂಖ್ಯೆ ಎಷ್ಟು ; ಅವುಗಳಲ್ಲಿ ಮಂಜೂರಾತಿ ಮಾಡಿರುವುದು ಎಷ್ಟು ; ಸಾಗುವಳಿ ಚೀಟಿ ನೀಡಿರುವುದು ಎಷ್ಟು ; ಖಾತೆ ಮಾಡಿರುವ ಹಾಗೂ ಬಾಕಿ ಇರುವ ಅರ್ಜಿಗಳು ಎಷ್ಟು ; (ಜಿಲ್ಲಾವಾರು ಮಾಹಿತಿ ನೀಡುವುದು)

(ಆ) ಸಾಗುವಳಿ ಚೀಟಿ ನೀಡಿ ವರ್ಷಗಳು ಕಳೆದರೂ ಖಾತೆ ಮಾಡದೇ ವಿಳಂಬವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಯಾವ ಕ್ರಮ ಕೈಗೊಳ್ಳಲಾಗಿದೆ ? (ವಿವರ ನೀಡುವುದು)

## ಸಾರಿಗೆ ಇಲಾಖೆಗೆ ಸಾಲಕ್ಕಾಗಿ ನಕಲಿ ದಾಖಲೆ ಸಲ್ಲಿಸುತ್ತಿರುವ ಬಗ್ಗೆ

**ಶ್ರೀ ಗೋವಿಂದ ರಾಜು (ವಿಧಾನಸಭೆಯಿಂದ ಚುನಾಯಿತರಾದವರು) –**

೧೫೪ (೧೨೬೩) ಸಾರಿಗೆ ಮತ್ತು ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಸಾಲಕ್ಕಾಗಿ ನಕಲಿ ದಾಖಲೆಗಳನ್ನು ಸಲ್ಲಿಸಿ, ಅಸ್ತಿತ್ವದಲ್ಲಿಲ್ಲದ ಬೋರ್‌ವೆಲ್ ರಿಗ್‌ಗಳನ್ನು ಹೊರ ರಾಜ್ಯಗಳಿಂದ ವರ್ಗಾಯಿಸುವ ಹೆಸರಲ್ಲಿ, ರಾಜ್ಯದ ಪ್ರಾದೇಶಿಕ ಸಾರಿಗೆ ಕಚೇರಿಗಳಲ್ಲಿ ಮರು ನೋಂದಣಿ ದಾಖಲಾತಿ ಸೃಷ್ಟಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಹಾಗಿದ್ದಲ್ಲಿ, ಇದುವರೆಗೂ ಎಷ್ಟು ಪ್ರಕರಣಗಳು ನಡೆದಿವೆ ; ಹಾಗೂ ಯಾವ ಯಾವ ಕ್ರಮ ತೆಗೆದುಕೊಳ್ಳಲಾಗಿದೆ ;

(ಇ) ಮರುನೋಂದಣಿಗೆ ಅರ್ಜಿ ಸಲ್ಲಿಸುವ ಸಂದರ್ಭದಲ್ಲಿ ಭೌತಿಕವಾಗಿ ವಾಹನ ಹಾಜರಿರಬೇಕೆಂಬ ನಿಯಮ ಇದೆಯೇ ; ಹಾಗೂ ಯಾವ ಯಾವ ನೀತಿ ನಿಯಮಗಳಿವೆ ;

(ಈ) ಬೋರ್‌ವೆಲ್ ರಿಗ್‌ಗಳಿಗೆ ಬ್ಯಾಂಕ್‌ಗಳಲ್ಲಿ ೧ ಕೋಟಿ ರೂ. ವರೆಗೆ ಸಾಲ ನೀಡುತ್ತಿದ್ದು, ಇದನ್ನೇ ಬಂಡವಾಳ ಮಾಡಿಕೊಂಡು ಅರುಣಾಚಲ ಪ್ರದೇಶ, ಮಣಿಪುರ, ನಾಗಾಲ್ಯಾಂಡ್ ಸೇರಿ ಇನ್ನಿತರ ರಾಜ್ಯಗಳಿಂದ ಮರುನೋಂದಣಿ ಮತ್ತು ವಿಳಾಸ ಬದಲಾವಣೆ ಹೆಸರಿನಲ್ಲಿ ರಾಜ್ಯದ ಆರ್‌ಟಿಓಗಳಿಗೆ ಕಳುಹಿಸಿ, ದಾಖಲಾತಿಗಳನ್ನು ಸೃಷ್ಟಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿಲ್ಲವೆ ;

(ಉ) ಈ ಪ್ರಕರಣದಡಿಯಲ್ಲಿ ಇದುವರೆಗೆ ಎಷ್ಟು ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳಲಾಗಿದೆ ? (ಸಂಪೂರ್ಣ ವಿವರ ನೀಡುವುದು)

## ಪಶುಸಂಗೋಪನೆ ಇಲಾಖೆಯಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಹಿಂದುಳಿದ ವರ್ಗಗಳಿಗಾಗಿ ಇರುವ ಯೋಜನೆ ಮತ್ತು ಮೇವಿನ ಕೊರತೆ ನೀಗಿಸುವ ಕುರಿತು

**ಶ್ರೀ ಶಾಂತಾರಾಮ್ ಬುಡ್ನ ಸಿದ್ದಿ (ನಾಮನಿರ್ದೇಶನ ಹೊಂದಿದವರು) –**

೧೫೫ (೧೩೫೪) ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಪಶುಸಂಗೋಪನೆ ಇಲಾಖೆಯಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಹಿಂದುಳಿದ ವರ್ಗದವರಿಗಾಗಿ ಇರುವ ಯೋಜನೆಗಳು ಯಾವುವು ; (ಸಂಪೂರ್ಣ ಮಾಹಿತಿ ನೀಡುವುದು)

(ಆ) ಪಶುಸಂಗೋಪನೆ ಇಲಾಖೆಯಲ್ಲಿ ಇರುವ ಸಾಲದ ಯೋಜನೆಗಳಾವುವು ಮತ್ತು ಫಲಾನುಭವಿಗಳಾಗಲು ಇರುವ ಮಾನದಂಡಗಳಾವುವು ; (ಮಾಹಿತಿ ನೀಡುವುದು)

(ಇ) ಪಶುಪಾಲಕ ಸಮಾಜದವರಿಗಾಗಿ ಬೇಸಿಗೆಯಲ್ಲಿ ಉಂಟಾಗುವ ಮೇವಿನ ಕೊರತೆಯನ್ನು ನೀಗಿಸಲು ಸರ್ಕಾರ ತೆಗೆದುಕೊಳ್ಳುವ ಮುನ್ನೆಚ್ಚರಿಕೆ ಕ್ರಮಗಳಾವುವು ? (ಸಂಪೂರ್ಣವಾಗಿ ವಿವರ ನೀಡುವುದು)

## ಹೊರ ರಾಜ್ಯದಲ್ಲಿರುವ ಮುಜರಾಯಿ ಇಲಾಖೆ ಆಸ್ತಿಗಳ ಕುರಿತು

**ಶ್ರೀ ಶರವಣ ಟಿ.ಎ. (ವಿಧಾನಸಭೆಯಿಂದ ಚುನಾಯಿತರಾದವರು) –**

೧೫೬ (೧೩೪೮) ಸಾರಿಗೆ ಮತ್ತು ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಹೊರ ರಾಜ್ಯಗಳಲ್ಲಿರುವ ಮುಜರಾಯಿ ಇಲಾಖೆಯ ಆಸ್ತಿಗಳಾವುವು ; ಸದರಿ ಆಸ್ತಿಗಳಿಂದ ಸರ್ಕಾರಕ್ಕೆ ಬರುವ ವಾರ್ಷಿಕ ಆದಾಯವೆಷ್ಟು ; (ಕಟ್ಟಡವಾರು ಮಾಹಿತಿಯನ್ನು ಪ್ರತ್ಯೇಕವಾಗಿ ನೀಡುವುದು)

(ಆ) ರಾಜ್ಯ ಸರ್ಕಾರದಿಂದ ಕಾಶಿವಿಶ್ವನಾಥ ದೇವಸ್ಥಾನ ಮತ್ತು ತಿರುಪತಿ ದೇವಸ್ಥಾನಗಳಲ್ಲಿ ಕರ್ನಾಟಕ ಭವನಗಳಲ್ಲಿರುವ ಕೊಠಡಿಗಳ ಸಂಖ್ಯೆ ಎಷ್ಟು ; ಅವುಗಳಿಂದ ಬರುವ ವಾರ್ಷಿಕ ಆದಾಯ ಎಷ್ಟು ;

(ಇ) ಕರ್ನಾಟಕ ಭವನ ಹೊರತುಪಡಿಸಿ ಕಾಶಿ ವಿಶ್ವನಾಥ ದೇವಸ್ಥಾನ ಮತ್ತು ತಿರುಪತಿ ದೇವಸ್ಥಾನಗಳಲ್ಲಿರುವ ಇತರೆ ಆಸ್ತಿಗಳೆಷ್ಟು ; ಮತ್ತು ಅಲ್ಲಿನ ಕರ್ನಾಟಕ ಭವನಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಸಿಬ್ಬಂದಿಗಳೆಷ್ಟು ; (ದೇವಸ್ಥಾನವಾರು ಪ್ರತ್ಯೇಕ ಮಾಹಿತಿ ನೀಡುವುದು)

(ಈ) ಕಾಶಿ ಮತ್ತು ತಿರುಪತಿಯಲ್ಲಿರುವ ಕರ್ನಾಟಕ ಭವನಗಳ ನಿರ್ವಹಣೆಯನ್ನು ಯಾರಿಗೆ ವಹಿಸಲಾಗಿದೆ ; ೨೦೨೨–೨೩ನೇ ಸಾಲಿನಿಂದ ಇಲ್ಲಿಯವರೆಗೆ ಸದರಿ ಭವನಗಳ ನಿರ್ವಹಣೆಗೆ ಬಿಡುಗಡೆ ಮಾಡಿದ ಅನುದಾನವೆಷ್ಟು ? (ವರ್ಷವಾರು ಮತ್ತು ಕಾಮಗಾರಿವಾರು ಮಾಹಿತಿ ನೀಡುವುದು)

## ರಾಜ್ಯದ ಕರಾವಳಿಗೆ ಸಂಪರ್ಕಿಸುವ ರಸ್ತೆಗಳ ಅಭಿವೃದ್ಧಿ ಬಗ್ಗೆ

**ಶ್ರೀ ಕಿಶೋರ್ ಕುಮಾರ್ ಪುತ್ತೂರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ ) –**

೧೫೭ (೧೩೪೩) ಲೋಕೋಪಯೋಗಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದ ಕರಾವಳಿ ಮತ್ತು ಮಲೆನಾಡಿನ ಜಿಲ್ಲೆಗಳನ್ನು ಬೆಂಗಳೂರು ಸೇರಿದಂತೆ ರಾಜ್ಯದ ದಶ ದಿಕ್ಕುಗಳಿಗೆ ಸಂಪರ್ಕಿಸುವ ಘಾಟಿ ರಸ್ತೆಗಳಲ್ಲಿ ಪ್ರತಿನಿತ್ಯ ಸಂಚರಿಸುವ ವಾಹನಗಳ ಸಂಖ್ಯೆ ಎಷ್ಟು ; ಈ ರಸ್ತೆಯು ತೀರಾ ಹದಗೆಟ್ಟಿದ್ದು, ವಾಹನ ಸಂಚಾರಕ್ಕೆ ತೊಂದರೆ ಆಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಘಾಟಿ ರಸ್ತೆಯಲ್ಲಿ ಎಷ್ಟು ಕಡೆ ಅಪಾಯಕಾರಿ ಸ್ಥಳಗಳನ್ನು ಗುರುತಿಸಲಾಗಿದೆ ; ಅಪಾಯಕಾರಿ ಸ್ಥಳಗಳಲ್ಲಿ ತಡೆಗೋಡೆ ನಿರ್ಮಾಣ ಕಾಮಗಾರಿ

ಪೂರ್ಣಗೊಂಡಿದೆಯೇ ; ತಡೆಗೋಡೆ ನಿರ್ಮಾಣಕ್ಕೆ ನೀಡಿರುವ ಹಣ ಎಷ್ಟು ;

(ಇ) ಹೆದ್ದಾರಿ ಕಾಮಗಾರಿ ಅಪೂರ್ಣವಾಗಿರುವ ಹಿನ್ನೆಲೆಯಲ್ಲಿ ವಾಹನ ಸವಾರರ ಸುರಕ್ಷತೆಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು ; ಇದೇ ಏಪ್ರಿಲ್‌ನಿಂದ ಜೂನ್ ತಿಂಗಳವರೆಗೆ ಶಿರಾಡಿ ಘಾಟ್ ರಸ್ತೆಯನ್ನು ಅಭಿವೃದ್ಧಿಪಡಿಸುವ ನಿಟ್ಟಿನಲ್ಲಿ ವಾಹನ ಸಂಚಾರವನ್ನು ಸ್ಥಗಿತಗೊಳಿಸಲಾಗುವುದೇ ;

(ಈ) ಘಾಟಿ ರಸ್ತೆಗಳಲ್ಲಿ ಅಭಿವೃದ್ಧಿ ಕಾಮಗಾರಿಗಳು ಆರಂಭಗೊಂಡಿದ್ದು ಯಾವಾಗ ; ಕಾಮಗಾರಿಗಳು ಪ್ರಸ್ತುತ ಯಾವ ಹಂತದಲ್ಲಿದೆ ; ಯಾವ ಸಂಸ್ಥೆಗೆ ಗುತ್ತಿಗೆ ನೀಡಲಾಗಿದೆ ; ಕಾಮಗಾರಿ ವಿಳಂಬಗೊಳ್ಳಲು ಕಾರಣವೇನು ; ಕಾಮಗಾರಿಯನ್ನು ತ್ವರಿತಗತಿಯಲ್ಲಿ ಪೂರ್ಣಗೊಳಿಸಲು ಕೈಗೊಂಡಿರುವ ಕ್ರಮಗಳೇನು ?

## ಮೈಸೂರು ಮಹಾನಗರ ಪಾಲಿಕೆಗೆ ಬರುವ ಗಾಂಧಿ ನಗರದ ಆದಿ ಜಾಂಬವ ರುದ್ರ ಭೂಮಿ ಬಗ್ಗೆ

**ಡಾ: ಡಿ. ತಿಮ್ಮಯ್ಯ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೧೫೮ (೧೨೯) ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಮೈಸೂರು ನಗರ ಪಾಲಿಕೆ ವ್ಯಾಪ್ತಿಗೆ ಬರುವ ಗಾಂಧಿ ನಗರದ ಆದಿ ಜಾಂಬವ ಕಾಲೋನಿಗೆ ಸೇರಿದ ರುದ್ರ ಭೂಮಿಗೆ (ಸ್ಮಶಾನ)ಕ್ಕೆ ಕನಿಷ್ಟ ಮೂಲಭೂತ ಸೌಲಭ್ಯಗಳು ಇಲ್ಲದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಸರ್ಕಾರ ಕೈಗೊಂಡಿರುವ ಕ್ರಮಗಳೇನು ; (ವಿವರ ನೀಡುವುದು)

(ಆ) ಸದರಿ ರುದ್ರ ಭೂಮಿ (ಸ್ಮಶಾನ)ಯಲ್ಲಿ ಮೂಲಭೂತ ಸೌಕರ್ಯಗಳಾದ ಕುಡಿಯುವ ನೀರು, ಶೌಚಾಲಯ, ಕಾಂಪೌಂಡ್, ವಿದ್ಯುತ್ ಸೌಕರ್ಯ ಹಾಗೂ ಇನ್ನಿತರ ಅಗತ್ಯ ಸೌಲಭ್ಯಗಳನ್ನು ಸರ್ಕಾರ ಒದಗಿಸಲು ಕ್ರಮ ವಹಿಸಲಾಗುವುದೇ ; ಹಾಗಿದ್ದಲ್ಲಿ, ಯಾವ ಕಾಲಮಿತಿಯೊಳಗೆ ಕ್ರಮ ಒದಗಿಸಲಾಗುವುದು ? (ಮಾಹಿತಿ ನೀಡುವುದು)

## ರಾಷ್ಟ್ರೀಯ ಹೆದ್ದಾರಿ ಕಾಮಗಾರಿಗಳು ನಿಧಾನಗತಿಯಲ್ಲಿ ನಡೆಯುತ್ತಿರುವ ಬಗ್ಗೆ

**ಶ್ರೀ ಎಸ್. ರವಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೧೫೯ (೧೨೯೨) ಲೋಕೋಪಯೋಗಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ನಿರ್ಮಾಣವಾಗುತ್ತಿರುವ ಹಲವಾರು ರಾಷ್ಟ್ರೀಯ ಹೆದ್ದಾರಿಗಳ ಕಾಮಗಾರಿಗಳು ನಿಧಾನಗತಿಯಲ್ಲಿ ಸಾಗುತ್ತಿರುವುದರಿಂದ ಸಾರ್ವಜನಿಕರಿಗೆ ಬಹಳಷ್ಟು ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ನಿಗದಿತ ಅವಧಿಯೊಳಗೆ ಪೂರ್ಣಗೊಳಿಸದೆ ಇರುವ ರಾಷ್ಟ್ರೀಯ ಹೆದ್ದಾರಿಗಳ ಕಾಮಗಾರಿಗಳು ಯಾವುವು ; (ಸಂಪೂರ್ಣ ವಿವರ ನೀಡುವುದು)

(ಆ) ನಿಧಾನ ಗತಿಯಲ್ಲಿ ಸಾಗುತ್ತಿರುವ ರಾಷ್ಟ್ರೀಯ ಹೆದ್ದಾರಿಗಳ ಕಾಮಗಾರಿಗಳನ್ನು ತ್ವರಿತವಾಗಿ ಪೂರ್ಣಗೊಳಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು; (ಸಂಪೂರ್ಣ ವಿವರ ನೀಡುವುದು)

## ಧಾರವಾಡ ಜಿಲ್ಲಾ/ತಾಲ್ಲೂಕು ಈಟಿಗಟ್ಟಿ ಗ್ರಾಮದ ಕುರಿತು

**ಶ್ರೀ ಅಡಗೂರ್ ಹೆಚ್. ವಿಶ್ವನಾಥ್ (ನಾಮನಿರ್ದೇಶನ ಹೊಂದಿದವರು) –**

೧೬೦ (೧೨೭೫) ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಧಾರವಾಡ ಜಿಲ್ಲೆ, ಧಾರವಾಡ ತಾಲ್ಲೂಕು ಈಟಿಗಟ್ಟ ಗ್ರಾಮದಲ್ಲಿ ಕೈಗಾರಿಕೆಗಾಗಿ ಸ್ವಾಧೀನಪಡಿಸಿದ ಒಟ್ಟು ಕ್ಷೇತ್ರ ೫೯೦.೧೪ಕ್ಕೆ ಸಂಬಂಧಿಸಿದಂತೆ ಈಟಿಗಟ್ಟಿ ಗ್ರಾಮದ ಸರ್ವೇ ನಂ. ೧೦ ಕ್ಷೇತ್ರ ೨೦ ಎಕರೆ ೬ ಗುಂಟೆ ಪೈಕಿ, ೯ ಎಕರೆ ೩೯ ಗುಂಟೆ ಇದ್ದು, ಮಾಹಿತಿಯು ಸರ್ಕಾರದ ಗಮನಕ್ಕೆ ಬಂದಿದೆಯೇ ; (ಸಂಪೂರ್ಣ ಮಾಹಿತಿ ನೀಡುವುದು)

(ಆ) ಈ ಜಮೀನಿಗೆ ಸಂಬಂಧಿಸಿದಂತೆ ತಹಶೀಲ್ದಾರರವರು ೪ ಎಕರೆ ೩೯ ಗುಂಟೆ ಜಮೀನನ್ನು ೦೪ ಬೇರೆ ಬೇರೆ ಅನಧಿಕೃತ ಜನಗಳಿಗೆ ಉದ್ದೇಶ ಪೂರ್ವಕವಾಗಿ ಭೂ ಮಾಲೀಕರೆಂದು ವರದಿ ನೀಡಿರುವುದರಿಂದ, ಅದರ ಮೂಲ ಭೂ ಮಾಲೀಕರಿಗೆ ಅನ್ಯಾಯ ಮಾಡಿದ್ದು, ತದನಂತರ ಮೂಲ ಭೂ ಮಾಲೀಕರಿಗೆ ಭೂ ಮಾಲೀಕರೆಂದು ವರದಿ ನೀಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದರೆ, ತೆಗೆದುಕೊಂಡ ಕ್ರಮಗಳೇನು ;

(ಇ) ತಹಶೀಲ್ದಾರರು ಕೆ.ಐ.ಎ.ಡಿಬಿ.ಯ ಮಾನ್ಯ ಸಹಾಯಕ ಆಯುಕ್ತರಿಗೆ, ಹಣ ಬಿಡುಗಡೆ ಮಾಡುವ ಕುರಿತು, ಮೂಲ ಮಾಲೀಕರನ್ನು ಹೊರತುಪಡಿಸಿ ಅನಧಿಕೃತ ವ್ಯಕ್ತಿಗಳ ಪರವಾಗಿ ಶಿಫಾರಸ್ಸು ಮಾಡಿರುವುದು ಮತ್ತು ತಹಶೀಲ್ದಾರ್, ಉಪ ವಿಭಾಗಾಧಿಕಾರಿಗಳು ಮತ್ತು ಜಿಲ್ಲಾಧಿಕಾರಿಯವರು ಜರುಗಿಸಿದ ಕ್ರಮಗಳು ಸ್ಪಷ್ಟವಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದರೆ, ಕೈಗೊಂಡ ಕ್ರಮಗಳೇನು ;

(ಈ) ತಹಶೀಲ್ದಾರವರು ಎಲ್ಲಾ ಮೂಲ ಭೂ ದಾಖಲೆಗಳು, ಮೂಲ ಭೂ ಮಾಲೀಕರ ಪರವಾಗಿದ್ದರೂ ಆರ್.ಟಿ.ಸಿ.ಯಲ್ಲಿ (ಪಾಣಿ) ಉದ್ದೇಶಪೂರ್ವಕವಾಗಿ ಹೆಸರನ್ನು ಸೇರಿಸದಿರುವುದು ಮತ್ತು ಮೂಲ ಭೂ ಮಾಲೀಕರು ಮಾನ್ಯ ತಹಶೀಲ್ದಾರವರ ಕಛೇರಿಗೆ ಹೆಸರು ಸೇರಿಸಲು ಅನೇಕ ಬಾರಿ ಅರ್ಜಿ ಸಲ್ಲಿಸಿದ್ದರೂ ಕ್ರಮವಹಿಸದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಉ) ಪ್ರಾದೇಶಿಕ ಆಯುಕ್ತರು ಬೆಳಗಾವಿ ಜಿಲ್ಲಾಧಿಕಾರಿಯವರು ಧಾರವಾಡ ಇವರುಗಳು ಮೂಲ ಭೂ ಮಾಲೀಕರಿಗೆ ಸ್ವಾಧೀನ ಪರಿಹಾರ ಧನ ವಿತರಿಸಿದೆ ಬೇರೆಯವರಿಗೆ ವಿತರಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಊ) ಮಾನ್ಯ ತಹಶೀಲ್ದಾರವರು ಆರ್.ಟಿ.ಸಿ.ಯ ಕಲಂ. ೯ ರಲ್ಲಿ ದಾಖಲು ಇದ್ದ ಮತ್ತು ದಾಖಲು ಮಾಡಬಹುದಾದ ರೈತರ ಹೆಸರನ್ನು ಯಾವುದೇ ಸರ್ಕಾರದ ಹಾಗೂ ನ್ಯಾಯಾಲಯದ ಆದೇಶ ಇಲ್ಲದಿದ್ದರೂ ಆರ್.ಟಿ.ಸಿ.ಯ ಕಲಂ ನಂ. ೧೨/೨ರಲ್ಲಿ ದಾಖಲು ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ದಲಿತರ ಭೂಮಿಯನ್ನು ಆರ್.ಟಿ.ಸಿ.ಯಲ್ಲಿ (ಪಾಣಿ ಸರ್ಕಾರ, ಕೆ.ಎಲ್.ಆರ್. ಸರ್ಕಾರವೆಂದು ನಮೂದು ಮಾಡಲು ಸರ್ಕಾರದ ಅಥವಾ ನ್ಯಾಯಾಲಯದ ಆದೇಶವಿದೆಯೇ ? (ಇದ್ದರೆ ಆದೇಶ ಪ್ರತಿ ನೀಡುವುದು)

## ಕರ್ನಾಟಕ ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರದ ಬಗ್ಗೆ

**ಶ್ರೀ ಎಸ್.ಎಲ್. ಭೋಜೇಗೌಡ (ಶಿಕ್ಷಕರ ಕ್ಷೇತ್ರ ) –**

೧೯೧ (೧೩೦೩) ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕರ್ನಾಟಕ ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರವು ಬಹುಮಹಡಿ ಕಟ್ಟಡ ಮತ್ತು ಬಡಾವಣೆಗಳ ನಿರ್ಮಾಣಗಳ ಅನುಮೋದನೆಗಾಗಿ ಪಡೆಯುವ ದಾಖಲಾತಿಗಳು ಯಾವುವು ; (ವಿವರ ನೀಡುವುದು)

(ಆ) ಕೆ–ರೇರಾ ಕಳೆದ ಮೂರು ವರ್ಷಗಳಲ್ಲಿ ಎಷ್ಟು ಪ್ರಸ್ತಾವನೆಗಳನ್ನು ಅನುಮೋದನೆಗಾಗಿ ಸ್ವೀಕರಿಸಿದೆ ; ಈ ಪೈಕಿ ಎಷ್ಟು ಪ್ರಸ್ತಾವನೆಗಳಿಗೆ ಅನುಮೋದನೆ ನೀಡಿದೆ ; ಅನುಮೋದನೆ ಪಡೆಯದೆ ಬಾಕಿ ಉಳಿದಿರುವ ಪ್ರಸ್ತಾವನೆಗಳು ಎಷ್ಟು ; ತಿರಸ್ಕರಿಸಿರುವ ಮತ್ತು ವಿಲೇ ಇಡಲಾಗಿರುವ ಪ್ರಸ್ತಾವನೆಗಳೆಷ್ಟು ; ಅವು ಯಾವುವು ; (ಪ್ರಕರಣವಾರು ಮಾಹಿತಿ ನೀಡುವುದು)

(ಇ) ಕೆ–ರೇರಾ ನಿಯಮಗಳನ್ನು ಉಲ್ಲಂಘಿಸಿ ಬಹುಮಹಡಿ ಕಟ್ಟಡ ಮತ್ತು ಬಡಾವಣೆಗಳ ನಿರ್ಮಾಣ ಮಾಡಿರುವವರ ವಿರುದ್ಧ ಕೆ–ರೇರಾ ಸಂಸ್ಥೆಯು ಇಲ್ಲಿಯವರೆಗೂ ದಾಖಲಿಸಿಕೊಂಡಿರುವ ದೂರುಗಳು ಎಷ್ಟು ; (ಪ್ರಕರಣವಾರು ಮತ್ತು ಜಿಲ್ಲಾವಾರು ಮಾಹಿತಿ ನೀಡುವುದು)

(ಈ) ಕೆ–ರೇರಾ ನಿಯಮಗಳನ್ನು ಉಲ್ಲಂಘನೆ ಮಾಡಿರುವವರಿಗೆ ವಿಧಿಸಿರುವ ದಂಡದ ರೂಪದ ಮೊತ್ತವೆಷ್ಟು ? (ಪ್ರಕರಣವಾರು ಮತ್ತು ಜಿಲ್ಲಾವಾರು ಮಾಹಿತಿ ನೀಡುವುದು)

## ಶ್ರೀ ರಾಮೇಶ್ವರ ದೇವಸ್ಥಾನದ ಜಮೀನನ್ನು ಖಾಸಗಿಯವರು ಮಾರಾಟ ಮಾಡಿರುವ ಕುರಿತು

**ಶ್ರೀ ಟಿ.ಎನ್. ಜವರಾಯಿ ಗೌಡ (ವಿಧಾನಸಭೆಯಿಂದ ಚುನಾಯಿತರಾದವರು) –**

೧೬೨ (೧೩೧೫) ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಮಂಡ್ಯ ಜಿಲ್ಲೆ ದೇವಲಾಪುರ ಹೋಬಳಿ ಕುಡುಗಬಾಳು ಗ್ರಾಮದ ಸರ್ವೆ ನಂ. ೧೧ರಲ್ಲಿರುವ ಜಮೀನಿನ ವಿಸ್ತೀರ್ಣವೆಷ್ಟು ; ಇದು ಯಾರ ಹೆಸರಿನಲ್ಲಿದೆ ; (ಇದರಲ್ಲಿ ಕಳೆದ ೫೦ ವರ್ಷಗಳ ಮ್ಯುಟೇಷನ್ ಪ್ರತಿಯೊಂದಿಗೆ ಮಾಹಿತಿ ನೀಡುವುದು)

(ಆ) ೧೯೭೬ರಲ್ಲಿ ಶ್ರೀ ರಾಮೇಶ್ವರ ದೇವಸ್ಥಾನದ ಹೆಸರಿನಲ್ಲಿದ್ದ ಈ ಜಮೀನನ್ನು ಬೇರೆಯವರಿಗೆ ಪರಭಾರೆ ಮಾಡಲಾಗಿದೆಯೇ ; ಇದ್ದಲ್ಲಿ, ಯಾರಿಗೆ ಯಾವ ಕಾರಣಕ್ಕಾಗಿ ಪರಭಾರೆ ಮಾಡಲಾಗಿದೆ ; (ಸಂಪೂರ್ಣ ಮಾಹಿತಿ ನೀಡುವುದು)

(ಇ) ಪ್ರಸ್ತುತ, ಶ್ರೀ ರಾಮೇಶ್ವರ ದೇವಸ್ಥಾನದ ಹೆಸರಿನಲ್ಲಿ ಎಷ್ಟು ಜಮೀನು ಇದೆ ; ಮುಜರಾಯಿ ದೇವಸ್ಥಾನದ ಜಮೀನನ್ನು ಖಾಸಗಿಯವರು ಮಾರಾಟ ಮಾಡುತ್ತಿರುವುದು ನಿಜವೇ ; ಹಾಗಿದ್ದಲ್ಲಿ, ಅವರುಗಳ ವಿರುದ್ಧ ಕೈಗೊಂಡ ಕ್ರಮವೇನು ;

(ಈ) ದೇವಸ್ಥಾನದ ಹೆಸರಿನಲ್ಲಿಯೇ ಜಮೀನನ್ನು ಉಳಿಸಲು ಸರ್ಕಾರದ ನಿಲುವೇನು ? (ಸರ್ವೆ, ಪಹಣಿ ಇತರೆ ದಾಖಲೆಗಳೊಂದಿಗೆ ಮಾಹಿತಿ ನೀಡುವುದು)

## ಮುಜರಾಯಿ ಇಲಾಖೆಯಿಂದ ಸರ್ಕಾರಕ್ಕೆ ಜಮಾ ಆಗಿರುವ ಅನುದಾನದ ಕುರಿತು

**ಶ್ರೀ ಡಿ.ಟಿ. ಶ್ರೀನಿವಾಸ್ (ಡಿ.ಟಿ.ಎಸ್.) (ಶಿಕ್ಷಕರ ಕ್ಷೇತ್ರ) –**

೧೬೩ (೧೩೭೬) ಸಾರಿಗೆ ಮತ್ತು ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಳೆದ ೦೫ ವರ್ಷಗಳಿಂದ ರಾಜ್ಯದ ಮುಜರಾಯಿ ದೇವಸ್ಥಾನಗಳಿಂದ ಕ್ರೋಢೀಕೃತವಾಗಿರುವ ಹಣ ಎಷ್ಟು ; ಈ ದೇವಸ್ಥಾನಗಳಿಂದ ಸರ್ಕಾರಕ್ಕೆ

ಬಂದಿರುವ ಆದಾಯ ಎಷ್ಟು ; (ದೇವಸ್ಥಾನಗಳವಾರು ಮಾಹಿತಿ ನೀಡುವುದು)

(ಆ) ಕಳೆದ ೦೫ ವರ್ಷಗಳಲ್ಲಿ ರಾಜ್ಯದ ಆಯವ್ಯಯದಲ್ಲಿ ಮುಜರಾಯಿ ದೇವಸ್ಥಾನಗಳ ಅಭಿವೃದ್ಧಿ ಮತ್ತು ನಿರ್ವಹಣೆಗೆ ನಿಗದಿಪಡಿಸಿರುವ ಅನುದಾನ ಎಷ್ಟು ; ಖರ್ಚಾಗಿರುವ ಅನುದಾನ ಎಷ್ಟು ; ಬಾಕಿ ಉಳಿದಿರುವ ಅನುದಾನ ಎಷ್ಟು ;

(ಇ) ಮುಜರಾಯಿ ದೇವಸ್ಥಾನಗಳ ಪಕ್ಕದಲ್ಲಿ ಇರುವ ಆಸ್ತಿಗಳನ್ನು ಸರ್ಕಾರವು ಅಭಿವೃದ್ಧಿಪಡಿಸಿದಲ್ಲಿ ಆದಾಯ ಹೆಚ್ಚು ಬರುವ ಸಾಧ್ಯತೆ ಇದೆಯೇ ; ಈ ನಿಟ್ಟಿನಲ್ಲಿ ಸರ್ಕಾರವು ರೂಪಿಸಿರುವ ಯೋಜನೆಗಳು ಯಾವುವು ? (ಜಿಲ್ಲಾವಾರು ಮಾಹಿತಿ ನೀಡುವುದು)

## ಹೊಸ ಆಳಸಮುದ್ರ ಸರ್ವಋತು ಬಂದರು ಅಭಿವೃದ್ಧಿಪಡಿಸುವ ಬಗ್ಗೆ

**ಶ್ರೀ ಎಂ. ನಾಗರಾಜು (ವಿಧಾನಸಭೆಯಿಂದ ಚುನಾಯಿತರಾದವರು) –**

೧೬೪ (೧೩೩೭) ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಉತ್ತರ ಕನ್ನಡ ಜಿಲ್ಲೆಯ ಕೇಣಿಯಲ್ಲಿ ೩೦ MTPA ಸಾಮರ್ಥ್ಯದ ಮತ್ತು ೪,೨೦೦ ಕೋಟಿ ರೂ. ಅಂದಾಜು ಯೋಜನಾ ಹೊಸ ಆಳಸಮುದ್ರ ಸರ್ವಋತು ಬಂದರನ್ನು ಸಾರ್ವಜನಿಕ – ಖಾಸಗಿ ಸಹಭಾಗಿತ್ವದಲ್ಲಿ ಅಭಿವೃದ್ಧಿಪಡಿಸಲಾಗುತ್ತಿದೆ ಎಂದು ಆಯ–ವ್ಯಯದಲ್ಲಿ ಘೋಷಿಸಿದ್ದು, ಸದರಿ ಕಾಮಗಾರಿಯ ಪ್ರಗತಿಯು ಪ್ರಸ್ತುತ ಯಾವ ಹಂತದಲ್ಲಿದೆ ;

(ಆ) ಸಾರ್ವಜನಿಕ–ಖಾಸಗಿ ಸಹಭಾಗಿತ್ವದಲ್ಲಿ ಅಭಿವೃದ್ಧಿಪಡಿಸುತ್ತಿರುವ ಈ ಬಂದರ್‌ನಲ್ಲಿ ಯಾವ ಯಾವ ಖಾಸಗಿ ಕಂಪನಿಗಳು ಭಾಗಿಯಾಗಿವೆ ಮತ್ತು ಅವರುಗಳ ಪಾಲು ಎಷ್ಟು ;

(ಇ) ಈ ಕಾಮಗಾರಿಗಾಗಿ ರಾಜ್ಯ ಸರ್ಕಾರದ ವತಿಯಿಂದ ಇಲ್ಲಿಯವರೆಗೆ ಎಷ್ಟು ಮೊತ್ತವನ್ನು ಬಿಡುಗಡೆಗೊಳಿಸಿ ಖರ್ಚು ಮಾಡಲಾಗಿದೆ ? (ಮಾಹಿತಿ ಒದಗಿಸುವುದು)

## ಖಾಸಗಿ ಸಂಘ ಸಂಸ್ಥೆಗಳಿಗೆ ವಿವಿಧ ಉದ್ದೇಶಗಳಿಗೆ ಗುತ್ತಿಗೆ ಆಧಾರದ ಮೇಲೆ ನೀಡಲಾಗಿರುವ ಸರ್ಕಾರಿ ಜಮೀನುಗಳ ಬಗ್ಗೆ

**ಶ್ರೀ ಜಗದೇವ್ ಗುತ್ತೇದಾರ್ (ವಿಧಾನಸಭೆಯಿಂದ ಚುನಾಯಿತರಾದವರು) –**

೧೬೫ (೧೩೦೪) ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಖಾಸಗಿ ಸಂಘ ಸಂಸ್ಥೆಗಳಿಗೆ ವಿವಿಧ ಉದ್ದೇಶಗಳಿಗೆ ಗುತ್ತಿಗೆ ಆಧಾರದ ಮೇಲೆ ನೀಡಲಾಗಿರುವ ಸರ್ಕಾರಿ ಜಮೀನುಗಳನ್ನು ಗುತ್ತಿಗೆ ಪಡೆದ ಸಂಸ್ಥೆಗೆ ಖಾಯಂ ಆಗಿ ಮಂಜೂರು ಮಾಡುವ ಬಗ್ಗೆ ದಿನಾಂಕ:೦೬.೦೭.೨೦೨೦ ರಂದು ಸರ್ಕಾರ ಹೊರಡಿಸಿರುವ ಆದೇಶದ ನಂತರ ಹೈದ್ರಾಬಾದ್ ಕರ್ನಾಟಕ ಭಾಗದಲ್ಲಿ ಸ್ವೀಕರಿಸಿರುವ ಅರ್ಜಿಗಳ ಸಂಖ್ಯೆ ಎಷ್ಟು ;

(ಆ) ಸ್ವೀಕರಿಸಿರುವ ಅರ್ಜಿಗಳಲ್ಲಿ ವಿಲೇವಾರಿಯಾದ ಅರ್ಜಿಗಳೆಷ್ಟು ;

(ಇ) ವಿಲೇವಾರಿ ಆಗದಿದ್ದಲ್ಲಿ, ಅದಕ್ಕೆ ಕಾರಣಗಳೇನು ; ಯಾವ ಕಾಲಮಿತಿಯೊಳಗೆ ವಿಲೇವಾರಿ ಮಾಡಲಾಗುವುದು ?

**ಕೆ.ಆರ್. ಮಹಾಲಕ್ಷ್ಮಿ**
ಕಾರ್ಯದರ್ಶಿ
ಕರ್ನಾಟಕ ವಿಧಾನ ಪರಿಷತ್ತು

ಸರ್ಕಾರಿ ಮುದ್ರಣಾಲಯ, ವಿಕಾಸ ಸೌಧ ಘಟಕ, ಬೆಂಗಳೂರು, ಕಾಸೂ 920 – ಪಿ2

**List of Questions for Oral Answers**

**Total No. of Questions - 15**

# LIST - 11

# KARNATAKA LEGISLATIVE COUNCIL

## ONE HUNDRED AND FIFTY FIFTH SESSION

## Wednesday, the 19th March, 2025

---

**GROUP - III**

1. Minister for Transport and Muzrai
2. Minister for Public Works
3. Minister for Revenue
4. Minister for Housing, Wakf and Minority Welfare
5. Minister for Animal Husbandry and Sericulture
6. Minister for Fisheries and Ports and Inland Water Transport

---

**CONSTRUCTION OF PORTS UNDER SAGAR MALA PROJECT**

**Sri S.V. Sankanur (Graduates' Constituency) -**

151 (1331) Will the Minister for Fisheries and Ports and Inland Water Transport be pleased to state:-

a) the number of ports which are functioning in the limit of sea shore of Karwar district; and the particulars of materials which are being exported; (information be furnished)

b) the number of new ports which are under construction up to sea shore of Karwar under Sagar Mala Project; the purpose for which these are being constructed; and the expenditure that has been earmarked to construct the same; (details be furnished)

c) whether it is true that the fishermen and public are opposing for the construction of new ports; if so, the complete information be furnished?

## SLAUGHTER HOUSE CONSTRUCTING IN SIRA TALUK

**Sri Chidanand M.Gowda (Graduates' Constituency) -**

152 (1362) Will the Minister for Animal Husbandry and Sericulture be pleased to state:-

a) the taluk which is having highest number of sheep and goats in the State; the number of sheeps and goats therein;

b) the particulars of facilities which are being provided for farmers of Sira taluk to create the supportive environment for the sheep and goat farming by the Animal Husbandry Department;

c) whether the Modern Processing Centre (slaughter house) has been sanctioned to Sira taluk by the State Sheep and Wool Development Corporation Limited; if so, the year in which it has been sanctioned and the capacity of the same; the particulars of other districts of the State in which the slaughter houses have been constructed;

d) the extent of land that has been acquired/granted to construct the slaughter house;

e) the number of people for whom the employment would be availed by the said slaughter house and the expectation of annual turnover for the same;

f) the estimated cost of the construction of slaughter house; the amount that has been released; the steps taken by the Government to release the outstanding amount; the present stage of the construction; the particular of agency for which the work has been entrusted;

g) the benefits that would be caused from the construction of slaughter houses for local sheep and goat farmers?

**REGULARISING UNAUTHORIZED CULTIVATION LAND**

**Dr. Yathindra S (Elected by Legislative Assembly)**

153 (1295) Will the Minister for Revenue be pleased to state:-

a) the number of applications that have been received for seeking regularizing unauthorized cultivation of land in the State till date; out of which, the number of applications have been sanctioned; the number of land grant certificates (saguvali chit) have been issued; the number of application for which Khata has been executed and the number of applications which are pending; (districtwise information be furnished)

b) whether it has come to the notice of the Government that the delay has been caused for non-issuance of Khata eventhough a year has been elapsed by issuing land grant certificate (saguvali chit); if so, the step that has been taken in this regard? (details be furnished)

**SUBMITTING FAKE DOCUMENT FOR LOAN**

**Sri Govinda Raju (Elected by Legislative Assembly) -**

154 (1263) Will the Minister for Transport and Muzrai be pleased to state:-

a) whether it has come to the notice of the Government that the re-registration document is being created in the Regional Transport Offices of the State in the name of transferring of non-existing borewell rigs from out of the States by submitting fake documents for the loan;

b) if so, the number of cases that have been taken place till date; and the particulars of action has been taken;

c) whether there is a rule that the vehicle should be present physically during submission of application for re-registration; and the particulars of policy and rules for the same;

d) the loan up to Rs.1 crore is being provided in the banks for borewell rigs, whether it has come to the notice of the Government that the documents are being created by sending to RTO's of the State in the name of re-registration and changing of address from other States including Arunachal Pradesh, Manipur and Nagaland by making the same as capital;

e) the number of officers against whom the action has been taken under this case till date? (complete details be furnished)

**SCHEMES FOR THE SCHEDULED CASTE, SCHEDULED TRIBES AND OTHER BACKWARD CLASSES AND TO OVERCOME THE SHORTAGE OF FODDER**

**Sri Shantharama Budna Siddi (Nominated) -**

155 (1354) Will the Minister for Animal Husbandry and Sericulture be pleased to state:-

a) the particulars of prevailing schemes for the scheduled caste, scheduled tribes and backward classes in the Department of Animal Husbandry; (complete information be furnished)

b) the particulars of prevailing loan schemes in the Department of Animal Husbandry and the particulars of prevailing criterias for enrollment as beneficiaries; (information be furnished)

c) the particulars of precautionary measures that would be taken by the Government to overcome the shortage of fodder that will cause in summer season for the pastoral community? (complete details be furnished)

**PROPERTIES OF MUZRAI DEPARTMENT IN OTHER STATES**

**Sri Sharavana T.A (Elected by Legislative Assembly) -**

156 (1348) Will the Minister for Transport and Muzrai be pleased to state:-

a) the particulars of properties of Muzrai Department in other States; the revenue that is being accrued to the Government exchequer from the said properties ; (buildingwise separate information be furnished)

b) the number of rooms in the Karnataka Bhavans which are in the Kashi Vishwatha and Tirupati temples of the State Government; the annual revenue that is being accrued from the same;

c) the number of other properties in Kashi Vishwatha and Tirupati temples excluding Karnataka Bhavan; and the number of staff who are working in those Karnataka Bhavans; (templewise separate information be furnished)

d) the authorities to whom the maintenance of the Karnataka Bhavans in Kashi and Tirupati temples have been entrusted; the grant that has been released for the maintenance of the said Bhavans from the year 2022-23 till date? (yearwise and workwise information be furnished)

## DEVELOPMENT OF ROADS CONNECTING TO COASTAL OF THE STATE

**Sri Kishor Kumar Puttur (Local Authorities Constituency)-**

157 (1343) Will the Minister for Public Works be pleased to state:-

a) the number of vehicles that are operating daily in the Ghati roads which are connecting ten directions of the State from the Coastal and Malnad districts of the State including Bengaluru; whether it has come to the notice of Government that the hardship has been caused to the movement of vehicle as this road has been deteriorated;

b) the number of hazardous spots which have been identified in the ghati roads; whether the construction work of barrier has been completed in the hazardous spots; the amount that has been provided for the construction of barrier;

c) the measures taken by the Government for the safety of commuters in view of the highway work has been incompleted; whether the movement of vehicle would be stopped with regard to development of the Shiradi Ghat road from this April to June;

d) the date on which the development works have been commenced in the Ghati roads; the present stage of the same; the particular of agency for which contract has been entrusted; the reason for the work has been delayed; the steps taken to complete the work rapidly?

## BURIAL GROUND OF ADIJAMBAVA COLONY OF GANDHINAGAR IN THE LIMITS OF MYSURU CITY CORPORATION

**Dr. D.Thimmaiah (Local Authorities Constituency) -**

158 (1299) Will the Minister for Revenue be pleased to state:-

a) whether it has come to the notice of the Government that there is no minimum basic facilities for the burial ground (grave yard) belonging to Adijambava colony of Gandhinagar which is coming under the limits of Mysuru City Corporation; if so, the steps taken by the Government; (details be furnished)

b) whether the steps would be taken by the Government to provide the basic facilities such as drinking water, toilet, compound, electricity and other necessary facilities to the said (grave yard) burial ground; if so, the timelimit within which the step would be taken to provide the same? (information be furnished)

## WORKS OF NATIONAL HIGHWAY

**Sri S. Ravi (Local Authorities Constituency) -**

159 (1292) Will the Minister for Public Works be pleased to state:-

a) whether it has come to the notice of the Government that the severe hardship is being caused for public due to the works of several National Highways which are being constructing in the State are going in slow pace manner; if so, the particulars of works of the National Highways which have not been completed within the stipulated period; (complete details be furnished)

b) the steps taken by the Government to complete the works of National Highways rapidly which are going on slow pace manner; (complete details be furnished)

## REGARDING ITIGATTI VILLAGE OF DHARWAD TALUK/ DISTRICT

**Sri Adagur H. Vishwanath (Nominated) -**

160 (1275) Will the Minister for Revenue be pleased to state:-

a) there is 9 acre 39 gunta, out of the extent of 20 acre 6 gunta of land bearing survey no.10 of Itigatti village regarding total extent of 590.14 which has been acquired for the industries in Itigatti village of Dharwad Taluk and District, whether the information has come to the notice of the Government; (complete information be furnished)

b) regarding this land, whether it has come to the notice of the Government that the injustice has been caused for original land owners of the same due to the report has been submitted by the Tahsildar intentionally that there are 4 different unauthorized persons as the land owners for the extent of 4 acre 39 gunta of land, there after the report has been provided for original landowners considering them as land owners; if so, the steps taken in this regard;

c) whether it has come to the notice of the Government that the Tahsildar has recommended for unauthorized persons excluding original land owners with regard to releasing of amount by the Hon'ble Assistant Commissioner of K.I.A.D.B and there is no clarity in the measure that have been initiated by the Tahsildar, Assistant Commissioners and Deputy Commissioners; if so, the steps taken for the same;

d) whether it has come to the notice of the Government that eventhough all original land records are in favour with original land owners the name has not been inserted in the R.T.C.(pahani)intentionally by the Tahsildar and not initiated any action eventhough the application has been submitted to the Hon'ble Tahsildar office many times by the original land owners to insert the name;

e) whether it has come to the notice of the Government that land acquisition compensation amount has been disbursed for other persons without disbursing for original land owners by the Regional Commissioner, Belagavi and the Deputy Commissioner, Dharwad;

f) whether it has come to the notice of the Government that the name of the farmers that have been recorded and would be recorded is column 9 of R.T.C by the Hon'ble Tahsildar, the same has been recorded in column No:12/2 of R.T.C eventhough there is no any Government and Court order for the same; whether there is the Government or Court order for making entry as Pahani Government, K.L.R Government in the R.T.C of the land of dalits? (if so, the order copy be furnished)

## REGARDING KARNATAKA REAL ESTATE REGULATORY AUTHORITY

**Sri S.L. Bhojegowda (Teachers' Constituency) -**

161 (1303) Will the Minister for Housing, Wakf and Minority Welfare be pleased to state:-

a) the particulars of the documents that will be received by the Karnataka Real Estate Regulatory Authority for the approval of constructions of multistoried buildings and the formation of layouts; (details be furnished)

b) the number of proposals that have been received for approval by the K-RERA during the last 3 years; out of which, the number of proposals for which the approval has been accorded; the number of proposals which are pending without getting the approval; the number of proposals that have been rejected and disposed of; the particulars of the same; (casewise information be furnished)

c) the number of complaints that have been filed by the K-RERA against the persons who have been constructed multistoried buildings and the layouts which have been formed by violating the K-RERA Rules till date; (casewise and districtwise information be furnished)

d) the amount in the form of penalty that has been imposed to the persons who have violated the K-RERA Rules? (casewise and districtwise information be furnished)

**ABOUT THE LAND OF RAMESHWARA TEMPLE**

**Sri T.N.Javarayi Gowda (Elected by Legislative Assembly) -**

162 (1315) Will the Minister for Revenue be pleased to state:-

a) the extent of land bearing survey number-01 of Kudagabalu village of Devalapura hobli in Mandya District; the name of person to whom the same has been belonged; (out of which, the information along with mutation copy during the last 50 years be furnished)

b) whether this land which was in the name of Sri.Rameshwara temple in 1976 has been alienated to an others; if so, the reason for which and the person to whom the same has been alienated; (complete information be furnished)

c) the extent of land which is in the name of Sri.Rameshwara temple at present; whether it is true that the land of muzari temple is being sold by the private persons; if so, the action that has been taken against them;

d) the stand of the Government to preserve the land merely in the name of the temple? (the information along with survey, pahani and other documents be furnished)

**GRANT ACCRUED TO THE GOVERNMENT EXCHEQUER BY THE MUZRAI DEPARTMENT**

**Sri D.T. Srinivas (D.T.S.) (Teachers' Constituency) -**

163 (1376) Will the Minister for Transport and Muzrai be pleased to state:-

a) the amount that has been accrued from the muzrai temples of the State during the last 5 years; the revenue that has been accrued to the exchequer of the Government from these temples; (templewise information be furnished)

b) the grant that has been earmarked for the development and maintenance of these muzrai temples in the budget of the State during the last 5 years; the grant that has been spent; the outstanding grant form the same;

c) whether there is a possibility to accrue more revenue if the existing properties which are adjacent to muzrai temples will developed by the Government, the particulars of schemes which have been chalkedout by the Government in this regard? (districtwise information be furnished)

**DEVELOPMENT OF ALL WEATHER NEW DEEP -SEA PORT**

**Sri Nagaraju M. (Elected by Legislative Assembly) -**

164 (1337) Will the Minister for Fisheries and Ports and Inland Water Transport be pleased to state:-

a) it has been declared in the budget that the all weather new deep-sea port with handling capacity of 30 MTPA is being developed under a Public-Private Partnership at the estimated cost of the project is Rs.4,200 crore in Keni of Uttara Kannada District, the present stage of the progress of the said work;

b) the particulars of companies which have been involved in this port which is being developed under a Public Private Partnership and the share of the same;

c) the amount that has been spent by the Government by releasing for these works till date? (information be furnished)

**REGARDING GOVERNMENT LANDS PROVIDING ON LEASE FOR VARIOUS PURPOSE**

**Sri Jagadev Guttedar(Elected by Legislative Assembly) -**

165 (1304) Will the Minister for Revenue be pleased to state:-

a) the number of applications that have been received in Hyderabad Karnataka region after the issuance of the Government order dated:06.07.2020 with regard to sanctioning of the Government lands that have obtained on lease basis for private organization and association for various purpose to them permanently;

b) out of the received applications, the number of applications that have been disposed of;

c) if not, the reasons for the same; the timelimit within which it would be disposed?

**K.R. MAHALAKSHMI**
Secretary
Karnataka Legislative Council

Government Press, Vikasa Soudha Unit, Bengaluru - WD -844 - Copies